"1959 ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 103 ರ ರೀತ್ಯಾ ಸ್ಥಿರಾಸ್ತಿಗಳನ್ನು ಆದೇಶ ಪೂರ್ವ ಸ್ಥಿರೀಕರಿಸಿರುವ ಆದೇಶ

ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾವಾ ಅರ್ಜಿಯನ್ನು ಸಲ್ಲಿಸಿ 1 ರಿಂದ 17 ನೇ ಪ್ರತಿವಾದಿಗಳಿಂದ ರೂ.11,47,60,000/- (ರೂ. ಹನ್ನೊಂದು ಕೋಟಿ ನಲವತ್ತೇಳು ಲಕ್ಷದ ಅರವತ್ತು ಸಾವಿರಗಳು ಮಾತ್ರ) ಹಾಗೂ ಈ ಮೊತ್ತಕ್ಕೆ ಸಾಲಿಯಾನ ಶೇ.18% ರಷ್ಟು ಬಡ್ಡಿ ದರದಂತೆ ಅಸಲು ಮತ್ತು ಬಡ್ಡಿ ವಸೂಲಾತಿಗಾಗಿ ದಾವೆಯನ್ನು ಹೂಡಿರುತ್ತಾರೆ. ಈ ದಾವೆ ಜೊತೆ ಕಲಂ 103 ರಡಿ ಅರ್ಜಿಯನ್ನು ಸಲ್ಲಿಸಿ 1ನೇ ಪ್ರತಿವಾದಿ ಧರ್ಮಪತ್ನಿಯಾದ ಶ್ರೀಮತಿ ಅನುಸೂಯ ಕೃಷ್ಣಮೂರ್ತಿರವರ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಆದೇಶ ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

1. ಅರ್ಜಿದಾರರು ಕಲಂ 103 ರ ಅರ್ಜಿ ಜೊತೆ ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿಯು ವಾದಿ ಬ್ಯಾಂಕಿನ ನೌಕರನಾಗಿದ್ದು, ವಾದಿ ಬ್ಯಾಂಕಿನ ರೇಷ್ಮೆ ವಿನಿಮಯ ಶಾಖೆಯ ಮೇಲ್ವಿಚಾರಕರಾಗಿ ಅನೇಕ ರೀತಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿದ್ದು, ಸದರಿ ಶಾಖೆಯಲ್ಲಿ 1ನೇ ಪ್ರತಿವಾದಿಯ ಪತ್ನಿ ಹೆಸರಿನಲ್ಲಿ **ಸೂರಜ್ ಡಿಜಿಟಲ್ ಪ್ರಿಂಟ್ಸ್** ಹೆಸರಿನಲ್ಲಿ ಉಳಿತಾಯ ಖಾತೆ ಸಂಖ್ಯೆ:6190050004047 ರಲ್ಲಿ ದಿನಾಂಕ:03.10.2008 ರಂದು ಉಳಿತಾಯ ಖಾತೆಯನ್ನು ತೆರೆದು ಪ್ರಾರಂಭಿಕ ಶುಲ್ಕ ರೂ.1,000-00 ಗಳಿಂದ ಪ್ರಾರಂಭಿಸಿ ಮೊದಲನೇ ಹಂತದಲ್ಲಿ ಸಾಮಾನ್ಯ ವ್ಯವಹಾರ ನಡೆಸಿದ್ದು, ನಂತರ ವರ್ಷಗಳಲ್ಲಿ ಹೆಚ್ಚಿನ ವ್ಯವಹಾರ ನಡೆದಿದ್ದು, ಅನೇಕ ದಿನಾಂಕಗಳಲ್ಲಿ ಕೃಷಿ ಪತ್ತಿನ ಸಾಲ ವಿತರಣೆಯಾಗಿರುವ ದಿನಾಂಕಗಳಲ್ಲಿ 1ನೇ ಪ್ರತಿವಾದಿ ಹೆಂಡತಿಯ ಖಾತೆಗೆ ಕೆ.ಸಿ.ಸಿ. ಸಾಲ ದುರುಪಯೋಗದ ಮೊತ್ತ ಸದರಿ ಉಳಿತಾಯ ಖಾತೆಗೆ ಜಮಾ ಆಗಿರುವುದು ದಾಖಲಾತಿಗಳಿಂದ ದೃಢಪಟ್ಟಿರುವುದಾಗಿ ತನ್ನ ಪ್ರಮಾಣ ಪತ್ರದಲ್ಲಿ ವಾದಿ ಬ್ಯಾಂಕು ಸ್ಪಷ್ಟಪಡಿಸಿರುತ್ತದೆ. ಜೊತೆಗೆ 1ನೇ ಪ್ರತಿವಾದಿಯ ಹೆಂಡತಿ ಗೃಹಿಣಿಯಾಗಿದ್ದು, ಆಸ್ತಿ ಖರೀದಿಸಲು ಸಾಕಷ್ಟು ಆದಾಯದ ಮೂಲಗಳು ಇಲ್ಲದ ಕಾರಣ ಸದರಿ ಆಸ್ತಿಗಳನ್ನು ದುರುಪಯೋಗದ ಹಣದಿಂದ ಖರೀದಿಸಿರುವುದು ಮತ್ತು ದುರುಪಯೋಗದ ಹಣ ಉಳಿತಾಯ ಖಾತೆಗೆ ವರ್ಗಾವಣೆಗೊಂಡಿರುವುದು ದೃಢಪಟ್ಟಿರುವುದಾಗಿ ಪ್ರತಿಪಾದಿಸಿರುತ್ತಾರೆ. ಹಾಗೂ ಅರ್ಜಿಯಲ್ಲಿ ನಮೂದಿಸಿರುವ ಸ್ಥಿರಾಸ್ತಿಗಳು 1ನೇ ಪ್ರತಿವಾದಿ ಹೆಂಡತಿಯ ಹೆಸರಿನಲ್ಲಿರುವ ಋಣಭಾರ ರಾಹಿತ್ಯ ಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಮುಂದುವರೆದು 1ನೇ ಪ್ರತಿವಾದಿಯ ಹೆಂಡತಿಯ ಹೆಸರಿನಲ್ಲಿರುವ (ಅರ್ಜಿಯಲ್ಲಿನ ಸ್ವತ್ತು ನಂ.2) ರನ್ನು ದಿನಾಂಕ:17.11.2014 ರಂದು ವಾದಿ ಬ್ಯಾಂಕಿಗೆ ಅಡಮಾನ ಮಾಡಿರುವುದರಿಂದ ಮೊದಲನೇ ಚಾರ್ಜನ್ನು ಬ್ಯಾಂಕಿಗೆ ಬಿಟ್ಟು ಇನ್ನುಳಿದ 2ನೇ ಚಾರ್ಜನ್ನು ಆದೇಶ ಪೂರ್ವ ಜಪ್ತಿ ಮಾಡಬೇಕೆಂದು ಕೋರಿರುತ್ತಾರೆ.

2. ಈ ಹಿನ್ನಲೆಯಲ್ಲಿ ದಾವೆಯನ್ನು ಹೂಡಲಾಗಿ ಆದರೆ, ಈ ದಾವೆ ಇತ್ಯರ್ಥವಾಗುವಲ್ಲಿ ಕಾನೂನು ರೀತ್ಯಾ ನಡವಳಿಕೆಗಳು ನಡೆಸಿ ಇತ್ಯರ್ಥಪಡಿಸುವಲ್ಲಿ ಸಮಯಾವಕಾಶ ತೆಗೆದುಕೊಳ್ಳುತ್ತಿದ್ದು, ಈ ಮಧ್ಯ 1 ನೇ ಪ್ರತಿವಾದಿ ಹೆಂಡತಿ ತಮ್ಮ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಮಾರಾಟ ಮಾಡುವ ಸಾಧ್ಯತೆಗಳಿರುತ್ತವೆ. ಒಂದು ವೇಳೆ ಈ ರೀತಿ ಪ್ರತಿವಾದಿ 1 ಮತ್ತು ಆತನ ಹೆಂಡತಿ ಜೊತೆಯಾಗಿ ತಮ್ಮ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಮಾರಾಟ ಮಾಡಿದ ಪಕ್ಷದಲ್ಲಿ ಈ ದಾವೆಯ ಅಂತಿಮ ಆದೇಶ ಅರ್ಜಿದಾರ ಬ್ಯಾಂಕಿನ ಪರವಾಗಿ ಬಂದರೂ ಸಹ ಅವಾರ್ಡ್ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ ಕಲಂ 103 ರಡಿಯಲ್ಲಿ ಸಲ್ಲಿಸಲಾಗಿರುವ ಅರ್ಜಿ ಆಧಾರಿತ 1ನೇ ಪ್ರತಿವಾದಿ ಹೆಂಡತಿ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಜಪ್ತಿಮಾಡುವಂತೆ ಕಲಂ 103 ರಡಿಯಲ್ಲಿ ಅರ್ಜಿ ಸಲ್ಲಿಸಿ, ಪ್ರಕರಣವು ಜರೂರಾಗಿರುವುದರಿಂದ ಜಪ್ತಿ ಪೂರ್ವ ಷರತ್ತುಬದ್ಧ ಆದೇಶವನ್ನು ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ. ಅರ್ಜಿಯ ಜೊತೆ 3 ಸ್ಥಿರಾಸ್ತಿಗಳ ಋಣಭಾರ ರಾಹಿತ್ಯ ಪತ್ರದ ನಕಲನ್ನು ಹಾಜರುಪಡಿಸಿರುತ್ತಾರೆ.

3. ಈ ನ್ಯಾಯಾಲಯವು ಎಲ್ಲಾ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ 1ನೇ ಪ್ರತಿವಾದಿ ಹೆಂಡತಿ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಆದೇಶ ಪೂರ್ವ ಜಪ್ತಿ ಮಾಡುವುದು. ಇಲ್ಲವಾದಲ್ಲಿ ವಾದಿ ಬ್ಯಾಂಕಿಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುವ ಸಂಭವವಿದ್ದು, ಹಾಗೂ ವಾದಿ ಬ್ಯಾಂಕು ಬಡ ಕೃಷಿಕರಿಗೆ ಸಾಲದ ರೂಪದಲ್ಲಿ ಮಂಜೂರು ಮಾಡುವ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದರಿಂದ ಅರ್ಜಿಯಲ್ಲಿನ ಸ್ಥಿರಾಸ್ತಿಗಳನ್ನು ಜಪ್ತಿ ಮಾಡುವುದು ಎಲ್ಲಾ ರೀತಿಯಲ್ಲೂ ಸಮಂಜಸವೆಂಬುದು ಈ ನ್ಯಾಯಾಲಯಕ್ಕೆ ಮನವರಿಕೆಯಾಗಿರುತ್ತದೆ.

1ನೇ ಪ್ರತಿವಾದಿ ಹೆಂಡತಿಯು ತನಗೆ ಸಾಕಷ್ಟು ಆದಾಯದ ಮೂಲಗಳಿದ್ದು, ಆಸ್ತಿಗಳನ್ನು ಖರೀದಿಸಿರುವುದಾಗಿ ದಾಖಲಾತಿಗಳೊಂದಿಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿ ಜಪ್ತಿ ಆದೇಶದಿಂದ ಮುಕ್ತರಾಗಲು, ಮುಕ್ತ ಅವಕಾಶಗಳಿರುತ್ತವೆ.

ಸದರಿ ಅಸ್ತಿಗಳನ್ನು ಜಪ್ತಿ ಪೂರ್ವ ಆದೇಶ ಮಾಡಲು ಸಾಕಷ್ಟು ಪುರಾವೆಗಳಿದ್ದು, ಶ್ರೀಮತಿ ಅನುಸೂಯ ಕೃಷ್ಣಮೂರ್ತಿ 1ನೇ ಪ್ರತಿವಾದಿಯ ಕಾನೂನುಬದ್ಧ ಹೆಂಡತಿಯಾಗಿ 1ನೇ ಪ್ರತಿವಾದಿಯು ದುರುಪಯೋಗದ ಹಣದಿಂದ ಆಸ್ತಿಯನ್ನು ಖರೀದಿಸಿರುವುದು ಮೇಲ್ನೋಟಕ್ಕೆ ದೃಢಪಡುತ್ತದೆ. ಹಾಗೂ 1ನೇ ಪ್ರತಿವಾದಿ ಹೆಂಡತಿ ಹೆಸರಿನಲ್ಲಿ ರೇಷ್ಮೆ ವಿನಿಮಯ ಶಾಖೆಯಲ್ಲಿ ಉಳಿತಾಯ ಖಾತೆ ತೆರೆದು ಅದರ ಮುಖಾಂತರ ವ್ಯವಹರಿಸಿರುವುದು ಸಹ ದೃಢಪಡುತ್ತದೆ. 1ನೇ ಪ್ರತಿವಾದಿಯು ದುರಾಲೋಚನೆ ಹಾಗೂ ದೂರಾಲೋಚನೆ ಎರಡನ್ನು ಮಾಡಿ ಬ್ಯಾಂಕಿನ ಹಣವನ್ನು ದುರುಪಯೋಗ ಪಡಿಸಿಕೊಂಡು ಸದರಿ ಹಣದಲ್ಲಿ ಚಿರಾಸ್ತಿಯನ್ನು ತನ್ನ ಹೆಂಡತಿಯ ಹೆಸರಿನಲ್ಲಿ ಬೇನಾಮಿ ಮಾಡಿಸಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಕಲಂ 103 ರಡಿಯಲ್ಲಿ ತಿಳಿಸಿರುವ 1ನೇ ಪ್ರತಿವಾದಿಯ ಹೆಂಡತಿ ಹೆಸರಿನಲ್ಲಿರುವ ಚಿರಾಸ್ತಿಯನ್ನು ಜಪ್ತಿ ಮಾಡುವುದು ಅವಶ್ಯಕವೆಂದು ಮನಗಂಡು ದಿನಾಂಕ:22.05.2015ರಂದು ನ್ಯಾಯಾಲಯದಿಂದ ಷರತ್ತುಬದ್ಧ ನೋಟೀಸನ್ನು ಹೊರಡಿಸಲಾಗಿದ್ದು, 1ನೇ ಪ್ರತಿವಾದಿ ಅಥವಾ ಆತನ ಧರ್ಮಪತ್ನಿ ರವರುಗಳು ಆದೇಶ ದಿನಾಂಕದಿಂದ 30 ದಿವಸಗಳೊಳಗಾಗಿ ದಾವಾ ಅರ್ಜಿಯಲ್ಲಿನ ಕ್ಲೈಂ ಮೊತ್ತಕ್ಕೆ ನಗದು ಭದ್ರತೆಯನ್ನು ವಾದಿ ಬ್ಯಾಂಕಿನ ಅಮಾನತ್ತಿನ ಖಾತೆಗೆ ಜಮಾ ಮಾಡಿ ಅಧಿಕೃತ ಚಲನ್ ಹಾಜರುಪಡಿಸುವಂತೆ ತಿಳುವಳಿಕೆ ನೀಡಲಾಗಿತ್ತು. ಷರತ್ತುಬದ್ಧ ತಿಳುವಳಿಕೆ ನೋಟೀಸ್ ಜಾರಿಯಾಗಿದ್ದರೂ ಸಹ 1ನೇ ಪ್ರತಿವಾದಿ ಅಥವಾ ಆತನ ಹೆಂಡತಿ ಷರತ್ತುಬದ್ಧ ಜಪ್ತಿ ಪೂರ್ವ ಆದೇಶವನ್ನು ಪಾಲನೆ ಮಾಡಿರುವುದಿಲ್ಲ ಹಾಗೂ ನ್ಯಾಯಾಲಯಕ್ಕೂ ಸಹ ಹಾಜರಾಗಿ ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಚಿರಾಸ್ತಿಗಳನ್ನು ಜಪ್ತಿ ಮಾಡುವುದು ಸಮಂಜಸ ಹಾಗೂ ಅವಶ್ಯಕವೆಂದು ಅಭಿಪ್ರಾಯ ಪಡುತ್ತಾ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

"ಸ್ಥಿರೀಕರಣ ಆದೇಶ"

ಮೇಲೆ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 70 ಮತ್ತು ಕಲಂ 103 ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139/ ಸಿಎಂಎಲ್/2010, ದಿನಾಂಕ:17.02.2011 ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಡಿ. ಪಾಂಡುರಂಗ ಗರಗ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು 1ನೇ ಪ್ರತಿವಾದಿ ಹೆಂಡತಿಯಾದ ಶ್ರೀಮತಿ ಅನುಸೂಯ ಕೃಷ್ಣಮೂರ್ತಿರವರ ಹೆಸರಿನಲ್ಲಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಈ ಪ್ರಕರಣದ ಅಂತಿಮ ತೀರ್ಪಿಗೆ ಒಳಪಟ್ಟು ಜಪ್ತಿ ಮಾಡಿ ಸ್ಥಿರೀಕರಿಸಿ ಆದೇಶಿಸಲಾಗಿದೆ.

ಈ ಕೆಳಗೆ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಖರೀದಿಸುವಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಗಳಿಗೆ ಈ ಜಪ್ತಿ ಪೂರ್ವ ಆದೇಶವು ಒಳಪಟ್ಟಿರುತ್ತದೆ.

"ಷೆಡ್ಯೂಲ್ ಆಸ್ತಿ ವಿವರಗಳು"

Schedule property belongs to first respondent wife, Anusuya w/o K. Krishnamurthy purchased on 20-10-2012

Schedule property No.1

All that piece and parcel of the property bearing Magadi Purashabha Khatha **No. 246/5546/50, site No.50,** measuring east to west **40ft** and north to south **30ft** situated at Nataraja Bhadavane, Magadi Town and Taluk, Ramanagara District with built up area thereon and Bounded on

East by ; Site No.41
West by ; Road
North by ; Site No.51
South by ; Site No.49

Schedule property No.2 (First Charge on BBR&RDCCBANK LTD) mortgaged on 17-11-2014)

All that piece and parcel of the property bearing Magadi Purashabha Khatha **No. 28/4/4182/ 4634,** measuring east to west **42ft** and north to south **40ft,** in total 1680, situated at T.B. Road, (Nataraja Bhadavane), Magadi Town and Taluk, Ramanagara District with built up area thereon and Bounded on

East by ; Road
West by ; Government property
North by ; property belongs to Lakshmi Devi
South by ; Government property.

Schedule property No.3 (Purchased on (11-12-2014)

All that piece and parcel of the property bearing Khatha **No.01/55/9, site No.1,** Assessment No. 55/9, previous Khatha No. 212, Khaneshumari No. 2674/1, measuring east to west **28.06ft** and north to south **40ft** in total **1144 Sqft**, situated at Kottigepalaya Village, SrigandaKaval Dhakle, Yeshwanthapura Hobli, Bangalore north Taluk, Bangalore City, now under (BBMP Limits) and Bounded on

East by ; 20ft Road
West by ; other property
North by ; Site No.2
South by ; 20ft Road

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರು ನಿಶೆಯೊಂದಿಗೆ ಈ ದಿನ ಅಂದರೆ ದಿನಾಂಕ:29.06.2015 ರಂದು ಹೊರಡಿಸಿರುತ್ತೇನೆ.

ಡಿ.ಪಾಂಡುರಂಗ ಗರಗ್
ಸಹಕಾರ ಸಂಘಗಳ ಜಂಟಿ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

PR. 684
SC. 10

ಸಹಕಾರ ಇಲಾಖೆ

ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು-18.

ದಾವಾ ಸಂಖ್ಯೆ:- ಜೆಆರ್‌ಬಿ/ಎಂಡಿ/37/2015-16

ವಾದಿ ವಿರುದ್ಧ ಪ್ರತಿವಾದಿ

ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ನಂ-6, ಲಕ್ಷ್ಮೀಸಧನ, 5ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-18.
ಪ್ರತಿನಿದಿಸುವವರು ಮುಖ್ಯಕಾರ್ಯನಿರ್ವಹಣಾಧಿಕಾರಿ

1) **ಶ್ರೀ. ಕೆ. ಕೃಷ್ಣಮೂರ್ತಿ,**
ನಂ-4, ತೇಜಶ್ರೀ ನಿಲಯ, 1ನೇ ಕ್ರಾಸ್, ಚನ್ನಪ್ಪ ಲೇಔಟ್, ಕೊಟ್ಟಿಗೆಪಾಳ್ಯ, ನಾಗರಬಾವಿ, ಬೆಂಗಳೂರು.

2) **ಶ್ರೀ ಎಂ. ಮಲ್ಲಿಕಾರ್ಜುನಯ್ಯ,**
ಮ್ಯಾನೇಜರ್, ಬಿಬಿಆರ್ & ಆರ್‌ಡಿಸಿಸಿ ಬ್ಯಾಂಕ್ ಲಿ.,
ಸಿಲ್ಕ್ ಎಕ್ಸ್‌ಚೆಂಜ್ ಶಾಖೆ,
ಮೇಲುಕೋಟೆ, ಕನಕಪುರ ಟೌನ್ & ತಾ।. ರಾಮನಗರ ಜಿಲ್ಲೆ.

3) **ಶ್ರೀ ಎ.ಪಿ. ವಿರೂಪಾಕ್ಷಯ್ಯ,** ಹಿರಿಯ ಸಹಾಯಕರು,
ಬಿಬಿಆರ್ & ಆರ್‌ಡಿಸಿಸಿ ಬ್ಯಾಂಕ್ ಲಿ., ಸಿಲ್ಕ್ ಎಕ್ಸ್‌ಚೆಂಜ್ ಶಾಖೆ,
ನಂ-53, 7ನೇ ಸಿ ಮೈನ್, ಆರ್‌ಪಿಸಿ ಲೇಔಟ್, ವಿಜಯನಗರ,
ಬೆಂಗಳೂರು-40.

4) **ಕೆ.ಎ. ಪದ್ಮವತಿ,**
ಮ್ಯಾನೇಜರ್,
ನಂ-20, 6ನೇ ಕ್ರಾಸ್, ಪೈಪ್‌ಲೇನ್ ಮುಖ್ಯರಸ್ತೆ, ದತ್ತಾತ್ರೇಯ ದೇವಸ್ಥಾನದ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು-03.

5) **ಎಲ್. ಮುನೆಗೌಡ,**
ನಂ-1124, 3ನೇ ಕ್ರಾಸ್, 2ನೇ ಮೈನ್, 5ನೇ ಹಂತ,
ರಾಜರಾಜೇಶ್ವರಿನಗರ, ಬೆಂಗಳೂರು-98.

6)ರಾಮೋಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ., ರಾಮೋಹಳ್ಳಿ,
ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾ।, ಬೆಂಗಳೂರು-74.

7) **ಚೋಳನಾಯಕನಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ.,**
ಚೋಳನಾಯಕನಹಳ್ಳಿ, ತಾವರೆಕೆರೆ ಹೋಬಳಿ, ತಿಪ್ಪಗೊಂಡನಹಳ್ಳಿ ಪೋಸ್ಟ್,
ಬೆಂಗಳೂರು ದಕ್ಷಿಣ ತಾ।. ಬೆಂಗಳೂರು-74.

8) **ಬಿದರಹಳ್ಳಿ ರೈತರ ಸೇವಾ ಸಹಕಾರ ಸಂಘ ನಿ.,** ಬಿದರಹಳ್ಳಿ,
ಬೆಂಗಳೂರು ಪೂರ್ವ ತಾ।.ಬೆಂಗಳೂರು-49.

9) ತಾವರೆಕೆರೆ ವ್ಯವಸಾಯ ಸೇವಾ ಸಹಕಾರ ಸಂಘ ನಿ., ತಾವರೆಕೆರೆ,
ಮಾಗಡಿ ಮುಖ್ಯರಸ್ತೆ,
ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-30.

10) **ಟಿ.ವಿ. ಸಿದ್ದಪ್ಪ,**
ಹಾಲಿ ನಿರ್ದೇಶಕರು,
ತಾವರೆಕೆರೆ ವ್ಯವಸಾಯ ಸೇವಾ ಸಹಕಾರ ಸಂಘ ನಿ., ತಾವರೆಕೆರೆ,
ಮಾಗಡಿ ಮುಖ್ಯರಸ್ತೆ,
ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-30.

11) **ಬಿ. ನಾಗರಾಜು,**
ಹಾಲಿ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್
ತಾವರೆಕೆರೆ ವ್ಯವಸಾಯ ಸೇವಾ ಸಹಕಾರ ಸಂಘ ನಿ., ತಾವರೆಕೆರೆ,
ಮಾಗಡಿ ಮುಖ್ಯರಸ್ತೆ,
ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-30.

12) **ಸಿ. ಬಸಪ್ಪ,**
ಹಾಲಿ ನಿರ್ದೇಶಕರು,
ಚೋಳನಾಯಕನಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ.,
ಚೋಳನಾಯಕನಹಳ್ಳಿ, ತಾವರೆಕೆರೆ ಹೋಬಳಿ,
ತಿಪ್ಪಗೊಂಡನಹಳ್ಳಿ ಪೋಸ್ಟ್, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-74.

13) **ನಾರಾಯಣ,**
ಹಾಲಿ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್
ಚೋಳನಾಯಕನಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ.,
ಚೋಳನಾಯಕನಹಳ್ಳಿ, ತಾವರೆಕೆರೆ ಹೋಬಳಿ,
ತಿಪ್ಪಗೊಂಡನಹಳ್ಳಿ ಪೋಸ್ಟ್, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-74.

14) **ಎಂ. ರಾಜಣ್ಣ,** ಹಾಲಿ ನಿರ್ದೇಶಕರು,
ಬಿದರಹಳ್ಳಿ ರೈತರ ಸೇವಾ ಸಹಕಾರ ಸಂಘ ನಿ., ಬಿದರಹಳ್ಳಿ, ಬೆಂಗಳೂರು ಪೂರ್ವ ತಾ|, ಬೆಂಗಳೂರು-49.

15) **ಎಂ. ಭರತ್,**
ಹಾಲಿ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್
ಬಿದರಹಳ್ಳಿ ರೈತರ ಸೇವಾ ಸಹಕಾರ ಸಂಘ ನಿ., ಬಿದರಹಳ್ಳಿ, ಬೆಂಗಳೂರು ಪೂರ್ವ ತಾ|, ಬೆಂಗಳೂರು-49.

16) **ಬಿ. ಜಯರಾಮ್,** ಹಾಲಿ ನಿರ್ದೇಶಕರು,
ರಾಮೋಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ., ರಾಮೋಹಳ್ಳಿ,
ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-74.

17) **ಎಂ. ಸುರೇಶ್,**
ಹಾಲಿ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್
ರಾಮೋಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ನಿ., ರಾಮೋಹಳ್ಳಿ,
ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾ|, ಬೆಂಗಳೂರು-74.

"1959 ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 103 ರ ರೀತ್ಯಾ ಸ್ಥಿರಾಸ್ತಿಗಳನ್ನು ಆದೇಶಕ್ಕೆ ಮುನ್ನ ಜಪ್ತಿ ನೋಟೀಸು

ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾವಾ ಅರ್ಜಿಯನ್ನು ಸಲ್ಲಿಸಿ 1 ರಿಂದ 17 ನೇ ಪ್ರತಿವಾದಿಗಳಿಂದ ರೂ.11,47,60,000/- (ರೂ. ಹನ್ನೊಂದು ಕೋಟಿ ನಲವತ್ತೇಳು ಲಕ್ಷದ ಅರವತ್ತು ಸಾವಿರಗಳು ಮಾತ್ರ) ಹಾಗೂ ಈ ಮೊತ್ತಕ್ಕೆ ಸಾಲಿಯಾನ ಶೇ.18% ರಷ್ಟು ಬಡ್ಡಿ ದರದಂತೆ ಅಸಲು ಮತ್ತು ಬಡ್ಡಿ ವಸೂಲಾತಿಗಾಗಿ ದಾವೆಯನ್ನು ಹೂಡಿರುತ್ತಾರೆ. ಈ ದಾವೆ ಜೊತೆ ಕಲಂ 103 ರಡಿ ಅರ್ಜಿಯನ್ನು ಸಲ್ಲಿಸಿ 17ನೇ ಪ್ರತಿವಾದಿ ರವರ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಆದೇಶ ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

1. ಅರ್ಜಿದಾರರು ಕಲಂ 103 ರ ಅರ್ಜಿ ಜೊತೆ ಸಲ್ಲಿಸಲಾಗಿರುವ ಪ್ರಮಾಣ ಪತ್ರದಲ್ಲಿ 17ನೇ ಪ್ರತಿವಾದಿಯು ರಾಮೋಹಳ್ಳಿ ಸಹಕಾರ ನೌಕರನಾಗಿದ್ದು, ವಾದಿ ಬ್ಯಾಂಕಿನ ರೇಷ್ಮೆ ವಿನಿಮಯ ಶಾಖೆಯ ಮುಖಾಂತರ ಅನೇಕ ರೀತಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿದ್ದು, ಆಸ್ತಿ ಖರೀದಿಸಿರುವುದು ದುರುಪಯೋಗದ ಹಣದಿಂದ ಮೇಲ್ನೋಟಕ್ಕೆ ದೃಢಪಟ್ಟಿರುವುದಾಗಿ ಪ್ರತಿಪಾದಿಸಿರುತ್ತಾರೆ ಹಾಗೂ ಅರ್ಜಿಯಲ್ಲಿ ನಮೂದಿಸಿರುವ ಸ್ಥಿರಾಸ್ತಿಯು 17ನೇ ಪ್ರತಿವಾದಿಯ ಹೆಸರಿನಲ್ಲಿರುವ ಋಣಭಾರ ರಾಹಿತ್ಯ ಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ಇ.ಸಿ.ಯನ್ನು ಪರಿಶೀಲಿಸಿದಾಗ 17ನೇ ಪ್ರತಿವಾದಿ ಆಸ್ತಿಯ ಮಾಲೀಕನಾಗಿರುವುದು ಮೇಲನೋಟಕ್ಕೆ ರುಜುವಾತಾಗಿರುವುದಾಗಿ ವಾದಿ ಬ್ಯಾಂಕು ಪ್ರತಿಪಾದಿಸಿರುತ್ತದೆ.

2. ಈ ಹಿನ್ನಲೆಯಲ್ಲಿ ದಾವೆಯನ್ನು ಹೂಡಲಾಗಿ ಆದರೆ, ಈ ದಾವೆ ಇತ್ಯರ್ಥವಾಗುವಲ್ಲಿ ಕಾನೂನು ರೀತ್ಯಾ ನಡವಳಿಕೆಗಳು ನಡೆಸಿ ಇತ್ಯರ್ಥಪಡಿಸುವಲ್ಲಿ ಸಮಯಾವಕಾಶ ತೆಗೆದುಕೊಳ್ಳುತ್ತಿದ್ದು, ಈ ಮಧ್ಯ 17ನೇ ಪ್ರತಿವಾದಿ ತನ್ನ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಮಾರಾಟ ಮಾಡುವ ಸಾಧ್ಯತೆಗಳಿರುತ್ತವೆ. ಒಂದು ವೇಳೆ ಈ ರೀತಿ ಪ್ರತಿವಾದಿ 17ನೇ ಪ್ರತಿವಾದಿ ತನ್ನ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಮಾರಾಟ ಮಾಡಿದ ಪಕ್ಷದಲ್ಲಿ ಈ ದಾವೆಯ ಅಂತಿಮ ಆದೇಶ ಅರ್ಜಿದಾರ ಬ್ಯಾಂಕಿನ ಪರವಾಗಿ ಬಂದರೂ ಸಹ ಅವಾರ್ಡ್ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ ಕಲಂ 103 ರಡಿಯಲ್ಲಿ ಸಲ್ಲಿಸಲಾಗಿರುವ ಅರ್ಜಿ ಆಧಾರಿತ 17ನೇ ಪ್ರತಿವಾದಿ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಜಪ್ತಿ ಮಾಡುವಂತೆ ಕಲಂ 103 ರಡಿಯಲ್ಲಿ ಅರ್ಜಿ ಸಲ್ಲಿಸಿ, ಪ್ರಕರಣವು ಜರೂರಾಗಿರುವುದರಿಂದ ಜಪ್ತಿ ಪೂರ್ವ ಷರತ್ತುಬದ್ಧ ಆದೇಶವನ್ನು ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ. ಅರ್ಜಿಯ ಜೊತೆ ಸ್ಥಿರಾಸ್ತಿಯ ಋಣಭಾರ ರಾಹಿತ್ಯ ಪತ್ರದ ನಕಲನ್ನು ಹಾಜರುಪಡಿಸಿರುತ್ತಾರೆ.

3. ಈ ನ್ಯಾಯಾಲಯವು ಎಲ್ಲಾ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ 17ನೇ ಪ್ರತಿವಾದಿ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಆದೇಶ ಪೂರ್ವ ಜಪ್ತಿ ಮಾಡುವುದು. ಇಲ್ಲವಾದಲ್ಲಿ ವಾದಿ ಬ್ಯಾಂಕಿಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುವ ಸಂಭವವಿದ್ದು ಹಾಗೂ ವಾದಿ ಬ್ಯಾಂಕು ಬಡ ಕೃಷಿಕರಿಗೆ ಸಾಲದ ರೂಪದಲ್ಲಿ ಮಂಜೂರು ಮಾಡುವ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದರಿಂದ ಅರ್ಜಿಯಲ್ಲಿನ ಸ್ಥಿರಾಸ್ತಿಯನ್ನು ಜಪ್ತಿ ಮಾಡುವುದು ಎಲ್ಲಾ ರೀತಿಯಲ್ಲಿ ಸಮಂಜಸವೆಂಬುದು ಈ ನ್ಯಾಯಾಲಯಕ್ಕೆ ಮನವರಿಕೆಯಾಗಿರುತ್ತದೆ.

ಅರ್ಜಿಯಲ್ಲಿ ನಮೂದಿಸಿರುವ ಅಸ್ತಿಯನ್ನು ಜಪ್ತಿ ಪೂರ್ವ ಆದೇಶ ಮಾಡಲು ಸಾಕಷ್ಟು ಪುರಾವೆಗಳಿದ್ದು, 17ನೇ ಪ್ರತಿವಾದಿಯು ದುರುಪಯೋಗದ ಹಣದಿಂದ ಆಸ್ತಿಯನ್ನು ಖರೀದಿಸಿರುವುದು ಮೇಲ್ನೋಟಕ್ಕೆ ದೃಢಪಡುತ್ತದೆ. 17ನೇ ಪ್ರತಿವಾದಿಯು ದುರಾಲೋಚನೆ ಹಾಗೂ ದೂರಾಲೋಚನೆ ಎರಡನ್ನು ಮಾಡಿ ಬ್ಯಾಂಕಿನ ಹಣವನ್ನು ದುರುಪಯೋಗ ಪಡಿಸಿಕೊಂಡು ಸದರಿ ಹಣದಲ್ಲಿ ಚಿರಾಸ್ತಿಯನ್ನು ತನ್ನ ಹೆಸರಿನಲ್ಲಿ ಖರೀದಿಸಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಕಲಂ 103 ರಡಿಯಲ್ಲಿ ತಿಳಿಸಿರುವ 17ನೇ ಪ್ರತಿವಾದಿಯ ಹೆಸರಿನಲ್ಲಿರುವ ಚಿರಾಸ್ತಿಯನ್ನು ಜಪ್ತಿ ಮಾಡುವುದು ಅವಶ್ಯಕ ಮತ್ತು ಸೂಕ್ತವೆಂದು ಅಭಿಪ್ರಾಯ ಪಡುತ್ತಾ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

"ಆದೇಶ"

ಮೇಲೆ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 70 ಮತ್ತು ಕಲಂ 103 ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139/ಸಿಎಂಎಲ್/2010, ದಿನಾಂಕ:17.02.2011 ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಡಿ. ಪಾಂಡುರಂಗ ಗರಗ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು 17ನೇ ಪ್ರತಿವಾದಿ ಎಂ.ಸುರೇಶ್ ರವರ ಹೆಸರಿನಲ್ಲಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಯನ್ನು ಈ ಪ್ರಕರಣದ ಅಂತಿಮ ತೀರ್ಪಿಗೆ ಆದೇಶ ಪೂರ್ವ ಜಪ್ತಿ ಮಾಡಿ ಷರತ್ತಿಗೊಳಪಟ್ಟು ಆದೇಶಿಸಲಾಗಿದೆ.

ಒಂದು ವೇಳೆ 17ನೇ ಪ್ರತಿವಾದಿಯು ದಾವಾ ಅರ್ಜಿಯಲ್ಲಿ ಕ್ಲೈಂ ಮಾಡಿರುವ ಹಣ ರೂ.11,47,60,000-00 (ರೂ.ಹನ್ನೊಂದು ಕೋಟಿ ನಲವತ್ತು ಏಳು ಲಕ್ಷ ಅರವತ್ತು ಸಾವಿರಗಳು ಮಾತ್ರ) ಗಳನ್ನು ವಾದಿ ಬ್ಯಾಂಕಿನಲ್ಲಿ ಅಮಾನತ್ತಿನ ಖಾತೆಗೆ ಈ ಆದೇಶ ಹೊರಡಿಸಿದ 30 ದಿವಸಗಳ ಒಳಗಾಗಿ ಜಮಾ ಮಾಡಿ ಅಧಿಕೃತ ಚಲನ್ ಅನ್ನು ಹಾಜರುಪಡಿಸಿದಲ್ಲಿ ಈ ಆದೇಶದಲ್ಲಿ ತಿಳಿಸಿರುವ ಷೆಡ್ಯೂಲ್ ಸ್ವತ್ತನ್ನು ಮುಕ್ತಗೊಳಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಒಂದು ವೇಳೆ 17ನೇ ಪ್ರತಿವಾದಿ ಈ ಮೇಲೆ ತಿಳಿಸಿರುವಂತೆ ಈ ಆದೇಶ ಹೊರಡಿಸಿದ 30 ದಿವಸಗಳೊಳಗಾಗಿ ಅವಶ್ಯಕ ಇರುವ ನಗದು ಭದ್ರತೆಯನ್ನು ನೀಡಲು ವಿಫಲರಾದಲ್ಲಿ ಈ ಷರತ್ತುಬದ್ಧ ಆದೇಶವನ್ನು ಸ್ಥಿರೀಕರಿಸಲಾಗುವುದು. ಆದರೆ ಈಗಾಗಲೇ 17ನೇ ಪ್ರತಿವಾದಿಯು ಮಾಗಡಿ ಕೆಂಪೇಗೌಡ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ರಲ್ಲಿ ದಿನಾಂಕ:20.12.2012 ರಂದು ಹಕ್ಕು ಪತ್ರಗಳ ಒತ್ತೆಇಟ್ಟು ರೂ.15,00,000/-ಗಳನ್ನು ಸಾಲವಾಗಿ ಪಡೆದಿರುವುದು ನಮೂನೆ-15 ರಿಂದ ಸ್ಪಷ್ಟವಾಗಿದ್ದು, ಸದರಿ ಸಂಘಕ್ಕೆ ಮೊದಲನೇಯ ಚಾರ್ಜು ಬಿಟ್ಟು, 2ನೇಯ ಋಣಕ್ಕೆ ವಾದಿ ಬ್ಯಾಂಕಿಗೆ ನಿಗಧಿಪಡಿಸಿ ಆದೇಶಿಸಲಾಗಿದೆ.

ಈ ಕೆಳಗೆ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಖರೀದಿಸುವಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಗಳಿಗೆ ಈ ಜಪ್ತಿ ಪೂರ್ವ ಆದೇಶವು ಒಳಪಟ್ಟಿರುತ್ತದೆ.

"ಷೆಡ್ಯೂಲ್ ಆಸ್ತಿ ವಿವರಗಳು"

Schedule property belongs to 17th respondent purchased on 09.03.2012

Schedule property

All that piece and parcel of the property bearing Khaneshumari old No:526/565/17, New No:598/565/17, site No 17, measuring east to west **30ft** and north to south **40ft,** in total 1200 Sq.ft., situated at Jeegenahalli, 3rd Stage, Ramanagara Town, Taluk & District Bounded on

East by : Site No:18
West by : Site No:16
North by : Site No:120
South by : 20ft Road

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರು ನಿಶೆಯೊಂದಿಗೆ ಈ ದಿನ ಅಂದರೆ ದಿನಾಂಕ:26.06.2015 ರಂದು ಹೊರಡಿಸಿರುತ್ತೇನೆ.

ಡಿ.ಪಾಂಡುರಂಗ ಗರಗ್
ಸಹಕಾರ ಸಂಘಗಳ ಜಂಟಿ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

PR. 689
SC. 10

PUBLIC NOTICE
SOFTJIN TECHNOLOGIES PRIVATE LIMITED
CIN: U72200KA2000PTC028344
Regd. Off: No.52, 3rd Floor, 100 Feet Main Road, Koramangala 2nd Block, Near Kendriya Sadan, Bengaluru-560034

Notice is hereby given that the Members of SOFTJIN TECHNOLOGIES PRIVATE LIMITED at their Extra-ordinary General Meeting held on Monday, 29th June 2015 at 5:00 p.m. at the Registered Office have passed the following Special Resolution to wind up the above company voluntarily:

"RESOLVED THAT as per the provisions of Section 484(1)(b) of the Companies Act, 1956 and other applicable provisions if any, the Company be and is hereby wound up voluntarily as members' voluntary winding up."

"RESOLVED FURTHER THAT as per the provisions of Section 486 of the Companies Act, 1956, the winding up shall be deemed to commence from the date of passing of this resolution."

"RESOLVED FURTHER THAT Mr. S.P. Nagarajan, Company Secretary in Whole Time Practice, Bangalore be and is hereby appointed as the Liquidator of the Company."

"RESOLVED FURTHER THAT any of the directors of the company be and is hereby authorised to verify, modify, sign, file with the statutory authorities and to do all the necessary deeds and actions relating to winding up of the company."

FOR SOFTJIN TECHNOLOGIES PRIVATE LIMITED

SD/-
NACHIKET URDHWARESHE
DIRECTOR
DIN: 00018661

SD/-
SHRIDHAR RAMNIVAS LADDHA
DIRECTOR
DIN: 00018538

Place: Bangalore
Date: 29th June 2015

Form No. 151

Members' Voluntary Winding Up

Notice of Appointment of Liquidator pursuant to Section 516

Name of the Company	SOFTJIN TECHNOLOGIES PRIVATE LIMITED
Corporate Identity Number	U72200KA2000PTC028344
Nature of Business	To establish, acquire, run, operate, provide services and design, development and implementation of turnkey solutions both in hardware and software for system design and information communication markets.
Address of the Registered Office	No.52,3rd Floor,100 Feet Main Road, Koramangala 2nd Block, Near Kendriya Sadan Bengaluru-560034 Karnataka, India
Name of the Liquidator	Mr. S.P. Nagarajan, Company Secretary in Whole-Time Practice, Bengaluru
Address of Liquidator	S-818, Eighth Floor, South Block, Manipal Center, 47, Dickenson Road, Bengaluru – 560 042
Date of Appointment	29th June 2015
By whom appointed	By the Members of the company through Special Resolution passed at their Extra-ordinary General Meeting held on Monday, 29th June 2015

PD. 28
SC. 5

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 121 ಸೇಶಿಕಾ 2015, ಬೆಂಗಳೂರು, ದಿನಾಂಕ 14–07–2015

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.06.2015ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ:–

1. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013.
2. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 516 ಜಿಪಅ 2013 ದಿನಾಂಕ 07.11.2014.
3. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 473 ಜಿಪಅ 2014 ದಿನಾಂಕ 25.11.2014.
4. ಸರ್ಕಾರಿ ಅಧಿಸೂಚನೆ ಸಂಖ್ಯೆ ಗ್ರಾಅಪ 121 ಸೇಶಿಕಾ 2015 ದಿನಾಂಕ 10.06.2015.
5. ಸರ್ಕಾರಿ ಅಧಿಸೂಚನೆ ಸಂಖ್ಯೆ ಗ್ರಾಅಪ 19 ಜಿಪಅ 2015 ದಿನಾಂಕ 24.03.2015.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ ಸಿಬಿಎಸ್/232/ಸಹಾಯಕ ಇಂಜಿನಿಯರ್ (ಎ–2)/ಅಂ.ಜೇ.ಪ./ 2012–13 ದಿನಾಂಕ 25.03.2013.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ಉಲ್ಲೇಖದ ಕ್ರಮ ಸಂಖ್ಯೆ (1) (2) ಮತ್ತು (3) ರ ಆದೇಶಗಳಲ್ಲಿ ವಿಲೀನಗೊಂಡ ಸಹಾಯಕ ಇಂಜಿನಿಯರ್‌ಗಳ ಸೇವಾ ಜೇಷ್ಠತೆಯನ್ನು ನಿಗದಿಪಡಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಿ, ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗುವ ಅಧಿಕಾರಿಗಳು ತಮ್ಮ ಆಕ್ಷೇಪಣೆ / ಸಲಹೆ ಏನಾದರೂ ಇದ್ದಲ್ಲಿ ಉಲ್ಲೇಖ (4)ರ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ದಿನಾಂಕ 18.06.2015ರಂದು ಪ್ರಕಟಿಸಿದ 15 ದಿನಗಳ ಒಳಗಾಗಿ ಅಂತಹ ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಸಂಬಂಧವಾಗಿ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ ವೃಂದದಲ್ಲಿ ದಿನಾಂಕ 01–06–2015ರಲ್ಲಿದ್ದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಕಟಿಸಲಾಗಿದೆ:–

1) ಸಹಾಯಕ ಇಂಜಿನಿಯರ್ ವೃಂದದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು ಉಲ್ಲೇಖಿತ (6) ರ ಆದೇಶದಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿರುವ ಅಂತರ್ ಜೇಷ್ಠತೆ (inter-se seniority)ಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

2) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಿದ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವ ಸಹಾಯಕ ಇಂಜಿನಿಯರ್‌ಗಳನ್ನು ಸದರಿ ವೃಂದದಲ್ಲಿ ಈಗ ಜೇಷ್ಠತೆ ನಿಗದಿಪಡಿಸಲು ಪರಿಗಣಿಸಿರುವುದಿಲ್ಲ.

3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ ವೃಂದದಲ್ಲಿ ಇನ್ನು ಮುಂದೆ ವಿಲೀನಗೊಳ್ಳುವವರ ಜೇಷ್ಠತೆಯನ್ನು ಅವರ ಮಾತೃ ಇಲಾಖೆಯಲ್ಲಿನ ಅಂತರ್ ಜೇಷ್ಠತೆ (inter-se seniority)ಯನ್ನು ಆಧರಿಸಿ ಕಾಪಾಡಲಾಗುವುದು..

4) ಉಲ್ಲೇಖ (5)ರ ಅಧಿಸೂಚನೆಯಲ್ಲಿ ಪ್ರಕಟಿಸಿದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಯಲ್ಲಿ ವಿಲೀನಗೊಂಡು ಕಾರ್ಯವರದಿ ಮಾಡಿಕೊಂಡಿರುವ ಸಹಾಯಕ ಇಂಜಿನಿಯರ್‌ಗಳ ವೃಂದದ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ದಿನಾಂಕ 01.01.2015ರಲ್ಲಿದ್ದಂತೆ ಪ್ರಕಟಿಸಲಾಗಿದ್ದು, ಕೊನೆಯ ಜೇಷ್ಠತಾ ಕ್ರಮ ಸಂಖ್ಯೆ 15 ಇರುವ ಕಾರಣ ಈ ಅಧಿಸೂಚನೆಗೆ ಲಗತ್ತಿಸಿರುವ ಪಟ್ಟಿಯಲ್ಲಿ ಜೇಷ್ಠತೆಯನ್ನು ಕ್ರಮ ಸಂಖ್ಯೆ (16)ರಿಂದ ಪ್ರಾರಂಭಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿದ್ದೇಶ್ ಪೋತಲಕಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಅಧಿಸೂಚನೆ ಸಂಖ್ಯೆ ಗ್ರಾಅಪ 121 ಸೇಶಿಕಾ 2015 ದಿನಾಂಕ 14-07-2015ಕ್ಕೆ ಅನುಬಂಧ

ದಿನಾಂಕ 01.06.2015ರಲ್ಲಿದ್ದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ (ಗ್ರೂಪ್-ಬಿ) ವೃಂದದ ಅಂತಿಮ ಜೇಷ್ಠತಾ ಪಟ್ಟಿ

ಜೇಷ್ಠತಾ ಕ್ರಮ. ಸಂಖ್ಯೆ.	ಲೋ.ಇ.ಯು ಪ್ರಕಟಿಸಿರುವ ಸ.ಇಂ.-2 ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಅಂತರ್ ಜೇಷ್ಟತಾ ಕ್ರ.ಸಂ.	ಅಧಿಕಾರಿಯ ಹೆಸರು ಶ್ರೀಯುತರು	ಹುಟ್ಟಿದ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಸ.ಇಂ. -2 ವೃಂದದಲ್ಲಿನ ಅರ್ಹತಾ ದಿನಾಂಕ	ಷರಾ
16.	2589	ಎ.ಎಸ್.ಮಧುಸೂದನ್	08.03.1956	01.04.1981	25.09.2001	ಅಧಿಸೂಚನೆ ಸಂಖ್ಯೆ ಗ್ರಾಅಪ 473 ಜಿಪಅ 2014 ದಿನಾಂಕ 25.11.2014 ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
17.	2645	ಶ್ರೀಕಾಂತ ಕಾಮು ನಾಯ್ಕ	05.06.1956	11.03.1981	25.09.2001	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
18.	2656	ಆರ್.ಜಿ.ಭಟ್	16.06.1959	12.03.1981	25.09.2001	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
19.	2897	ಪಾಲ್‌ವಿನ್ಸೆಂಟ್ ಸಿ.	28.03.1962	14.07.1983	25.09.2001	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
20.	3187	ಆರ್.ಎನ್.ಮೇಟಿ	01.06.1963	26.09.1983	26.02.2004	ಅಧಿಸೂಚನೆ ಸಂಖ್ಯೆ ಗ್ರಾಅಪ 516 ಜಿಪಅ 2013 ದಿನಾಂಕ 07.11.2014ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
21.	3203	ರಾಮಕೃಷ್ಣ ಶ್ರೀನಿವಾಸ ಜೋಶಿ	06.05.1960	26.09.1983	26.02.2004	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
22.	3208	ಕುಂಬಾರ ಬಿ.ಎಸ್.	01.05.1961	24.09.1983	26.02.2004	ಅಧಿಸೂಚನೆ ಸಂಖ್ಯೆ ಗ್ರಾಅಪ 516 ಜಿಪಅ 2013 ದಿನಾಂಕ 07.11.2014ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
23.	3266	ಶೇಷಾದ್ರಿ ಎಚ್.ಡಿ.	20.07.1964	16.04.1986	26.02.2004	ಅಧಿಸೂಚನೆ ಸಂಖ್ಯೆ ಗ್ರಾಅಪ 516 ಜಿಪಅ ದಿನಾಂಕ 07.11.2014ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.

24.	3280	ಸುರೇಶ್ ಲಕ್ಷ್ಮಣ ನಾಯ್ಕ	14.05.1962	01.12.1985	26.02.2004	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
25.	3381	ಈಶ್ವರಪ್ಪ ಬಿ.	26.02.1963	09.01.1986	26.02.2004	ಅಧಿಸೂಚನೆ ಸಂಖ್ಯೆ ಗ್ರಾಅಪ 516 ಜಿಪಅ 2013 ದಿನಾಂಕ 07.11.2014ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
26.	3562	ರಾಮದಾಸ್ ಗೋವಿಂದ ಗುನಗಿ	16.02.1962	11.03.1986	28.05.2004	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
27.	4134	ಸುರೇಶ್ ಗೋವಿಂದ ನಾಯ್ಕ	03.01.1964	29.09.1994	07.02.2011	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
28.	4164	ಸಂಜೀವ ಆರ್. ನಾಯ್ಕ	15.12.1964	29.09.1994	07.02.2011	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.
29	4225	ಹೆಚ್. ರಂಗನಾಥ	01.06.1967	22.08.1998	07.02.2011	ಅಧಿಸೂಚನೆ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07.10.2013ರಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ. ಅದರಂತೆ ಸದರಿಯವರು ಗ್ರಾ.ಅ.ಪಂ.ರಾಜ್ ಕಾರ್ಯ ವರದಿ ಮಾಡಿಕೊಂಡಿದ್ದಾರೆ.

ಟಿಪ್ಪಣಿ :– ಶ್ರೀ ರಿಯಾಜ್ ಅಹ್ಮದ್ ಎಂ. ದಫೇದಾರ, ಶ್ರೀಮತಿ ಆರ್.ಎ.ಜಕ್ಕಲಿ, ಶ್ರೀ ಉಮಾಕಾಂತ್ ಎಸ್. ಮತ್ತು ಶ್ರೀ ವಿ.ಡಿ.ಕೋಳಂಬಕರ್ ಇವರುಗಳ ಸೇವೆಯನ್ನು ಸರ್ಕಾರಿ ಆದೇಶ ಸಂ: ಗ್ರಾಅಪ 310 ಜಿಪಅ 2013 ದಿ: 7.10.2013 ರಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದ್ದು, ಈ ನಾಲ್ಕು ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯ ವರದಿ ಮಾಡಿಕೊಳ್ಳದಿರುವುದರಿಂದ ಇವರುಗಳ ಹೆಸರುಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತೆಯಲ್ಲಿ ಪರಿಗಣಿಸಿರುವುದಿಲ್ಲ.

ಸಿದ್ದೇಶ್ ಪೋತಲಕಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

PR. 695

SC. 200

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ತಿದ್ದುಪಡಿ ಅಧಿಸೂಚನೆ

ಸಂಖ್ಯೆ : ಸಿಐ 45 ಎಸ್‌ಪಿಕ್ಯೂ 2015, ಬೆಂಗಳೂರು, ದಿನಾಂಕ : 30–05–2015.

ಸರ್ಕಾರವು ಕೆ.ಐ.ಎ.ಡಿ. ಕಾಯ್ದೆ 28(1)ರಡಿಯಲ್ಲಿ ಅಧಿಸೂಚನೆ ಸಂಖ್ಯೆ : ಸಿಐ 754 ಎಸ್‌ಪಿಕ್ಯೂ 2007, ದಿನಾಂಕ : 01–12–2009ರನ್ವಯ ತುಮಕೂರು ಜಿಲ್ಲೆ/ ತಾಲ್ಲೂಕು, ಕೋರಾ ಹೋಬಳಿ, ಯಲದಡ್ಲು ಮತ್ತು ನಾಗೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 1435.00 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ (ಸುವರ್ಣ ಕರ್ನಾಟಕ ಕಾರಿಡಾರ್ ಯೋಜನೆ) ಸ್ವಾಧೀನಪಡಿಸಿಕೊಂಡಿದ್ದು, ಅಧಿಸೂಚನೆಯ ಕ್ರಮ ಸಂಖ್ಯೆ : 258ರಲ್ಲಿ ಸರ್ವೆ ನಂ. 150 ರಲ್ಲಿ 2–26 ಎಕರೆ ಜಮೀನು ಕಾಲಂ 2 ರಲ್ಲಿ ತುಮಕೂರು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ ಎಂಬುದಾಗಿ ಅಧಿಸೂಚಿಸಲ್ಪಟ್ಟಿರುತ್ತದೆ.

ತುಮಕೂರು ಉಪ ವಿಭಾಗಾಧಿಕಾರಿಗಳ ಆದೇಶದ ಸಂಖ್ಯೆ : ಆರ್.ಆರ್.ಟಿ. (ಅ)(ತು) 184/ 13–14, ದಿನಾಂಕ : 23–07–2014ರಂತೆ ರಂಗಪ್ಪ ಬಿನ್ ಕಾನಪ್ಪನವರಿಗೆ ಖಾತೆಗೆ ಆದೇಶವಾಗಿದ್ದು, ಆರ್.ಟಿ.ಸಿ. ದಾಖಲೆ ಬಂದಿರುತ್ತದೆ. ಅಧಿಸೂಚಿಸಲ್ಪಟ್ಟಿರುವ ತುಮಕೂರು ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ ಎಂಬುದರ ಬದಲಾಗಿ ರಂಗಪ್ಪ ಬಿನ್ ಕಾನಪ್ಪ ಎಂಬುದಾಗಿ 28(1)ರಲ್ಲಿ ತಿದ್ದುಪಡಿಯಾಗಬೇಕಾಗಿರುತ್ತದೆ.

ತುಮಕೂರು ಉಪ ವಿಭಾಗಾಧಿಕಾರಿಗಳ ಆದೇಶ ಮತ್ತು ಎಂ.ಆರ್.ಹೆಚ್ 1/2014–15, ದಿನಾಂಕ: 21–0802014ರಂತೆ ಆಗಿರತಕ್ಕ ಬದಲಾವಣೆಯನ್ನು ಅನುಸರಿಸಿ, ವಿಧಿ 28(1)ರ ಅಧಿಸೂಚನೆಗೆ ಈ ಕೆಳಗಿನಂತೆ ತಿದ್ದುಪಡಿಯ ಅಧಿಸೂಚನೆಯನ್ನು ಸಿದ್ದಪಡಿಸಿ, ಅನುಮೋದನೆಗೆ ಸಲ್ಲಿಸಿದೆ. ವಿಧಿ 28(1)ರಡಿ ಈಗಾಗಲೇ ಹೊರಡಿಸಿರುವ ಮೇಲ್ಕಂಡ ಅಧಿಸೂಚನೆ ಈ ಕೆಳಗಿನಂತೆ ತಿದ್ದುಪಡಿ ಹೊರಡಿಸಲಾಗಿದೆ.

ಗ್ರಾಮ: ಯಲದಡ್ಲು	**ಹೋಬಳಿ :**ಕೋರಾ	**ತಾಲ್ಲೂಕು :**ತುಮಕೂರು	**ಜಿಲ್ಲೆ :** ತುಮಕೂರು

ಕಲಂ 28(1)ರ ಅಧಿಸೂಚನೆಯಂತೆ						ತಿದ್ದುಪಡಿಯಂತೆ					
ಗೆಜೆಟ್ ಕ್ರ. ಸಂ.	ಖಾತೆದಾರರ ಹೆಸರು ಮತ್ತು ಅನುಭವದಾರರ ಹೆಸರು	ಸ್ವಾಧೀನಪಡಿಸಿಕೊಂಡ ಜಮೀನಿನ ವಿವರ				ಕ್ರ. ಸಂ.	ಖಾತೆದಾರರ ಹೆಸರು ಮತ್ತು ಅನುಭವದಾರರ ಹೆಸರು	ಸರ್ವೆ ನಂಬರ್	ವಿಸ್ತೀರ್ಣ (ಎ–ಗುಂ)	ಖರಾಬು (ಎ–ಗುಂ)	ಐನು (ಎ–ಗುಂ)
		ಸರ್ವೆ ನಂಬರ್	ವಿಸ್ತೀರ್ಣ (ಎ–ಗುಂ)	ಖರಾಬು (ಎ–ಗುಂ)	ಐನು (ಎ–ಗುಂ)						
258	ತು.ತಾ.ಪ್ರಾ.ಸ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಿ)	150	2–26	–	2–26	1	ರಂಗಪ್ಪ ಬಿನ್ ಕಾನಪ್ಪ	150	2–26	–	2–26

P.R. 620

SC - 50

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.) (ಪ್ರ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59